6

# ನೀವು ಉತ್ತಮರಾಗಿದ್ದು ಪರಾಸಕ್ತಿ ಯುಳ್ಳವರಾಗಿರ್ರಿ (1 ಪೇತ್ರ 3:1-7)

ಸಮಾನತ್ವವೆಂಬ ಹೋರಾಟದ ನಡುವೆ, ಯಾವ ಸ್ತ್ರೀಯರು, ಜಯಗಳಿಸಬೇಕಿತ್ತೋ ಅಂಥವರು ಅದನ್ನು ಕಳಕೊಂಡದ್ದು ವಿಪರ್ಯಾಸವೇ! ಲಿಂಗಗಳು "ಸಮಾನವಾದವುಗಳಲ್ಲ." ಯಾವಾಗಲು ಸ್ತ್ರೀಯರು ಮಕ್ಕಳನ್ನು ಹೆರುತ್ತಿದ್ದರು, ಪುರುಷರು ಯುದ್ಧ ಮಾಡಲು ಹೋಗುತ್ತಿದ್ದರು, ಇದು ಸತ್ಯ ಸಂಗತಿಯಾಗಿದೆ. ಸಮಾನತ್ವದ ಹೆಸರಿನಲ್ಲಿ ಸ್ತ್ರೀಯರನ್ನು ಯುದ್ಧಕ್ಕೆ ಕಳುಹಿಸಬಹುದು, ಆದರೆ ಪುರುಷರು ಮಕ್ಕಳನ್ನು ಹೆರುವದು ಅಸಾಧ್ಯ. ಸ್ವಾಭಾವಿಕವಾದ ಮತ್ತು ಸಾಮಾಜಿಕವಾದ ವ್ಯತ್ಯಾಸಗಳು ಯಾವಾಗಲೂ ಸ್ತ್ರೀ ಅಥವಾ ಪುರುಷರ ಪರವಾಗಿ ಕಾರ್ಯನಿರ್ವಹಿಸುವದಿಲ್ಲ. ಉದಾಹರಣೆಗೆ ಮಾನಸಿಕವಾದ ಒತ್ತಡ ಅಥವಾ ದೈಹೀಕವಾದ ಬಲಹೀನತೆಯಲ್ಲಿ, ಪುರುಷರು; ಸ್ತ್ರೀಯರಿಗಿಂಥ ಚಿಕ್ಕ ವಯಸ್ಸಿನಲ್ಲಿಯೇ ಮರಣ ಹೊಂದುತ್ತಾರೆ. ಸಮಾಜಿಕ ಹಾಗೂ ಸ್ವಾಭಾವಿಕ ಬಾರವು ಸ್ತ್ರೀ ಮತ್ತು ಪುರುಷರಲ್ಲಿ ವ್ಯತ್ಯಾಸವಾಗಿಯೂ ಅಸಮಾನವಾಗಿಯು ಕಾರ್ಯ ನಿರ್ವಹಿಸುತ್ತವೆ. ಈ ಅಸಮಾನತೆಗಳನ್ನು ಬುನಾದಿ ಮಾಡಿಕೊಂಡು "ಲಿಂಗಬೇಧ" ಮಾಡುವಂಥದ್ದು ಮೂರ್ಖತನವಾಗುತ್ತದೆ.

ಯಾವುದೇ ನ್ಯಾಯಾಂಗವಾಗಲೀ ಅಥವಾ ಸಾರ್ವಜನಿಕ ತಿಳುವಳಿಕೆಗಳಾಗಲೀ, ಪುರುಷನು ಮಾಡುವಂಥದ್ದನ್ನು ಪುರುಷನೇ ಮಾಡಬೇಕು, ಸ್ತ್ರೀ ಮಾಡುವಂಥದ್ದನ್ನು ಸ್ತ್ರೀಯೇ ಮಾಡಬೇಕು ಎಂಬ ನಿಯಮಗಳನ್ನು ತೆಗೆದು ಹಾಕಲು ಸಾಧ್ಯವಿಲ್ಲ. ಪ್ರತಿಯೊಬ್ಬರು ತಮಗೆ ನಿಯಮಿತವಾಗಿರುವ ಪಾತ್ರಗಳನ್ನು ಸಂಬಂಧಕ್ಕೆ ತಕ್ಕ ಹಾಗೆ ಈ ಪ್ರಪಂಚದಲ್ಲಿ ನಿರ್ವಹಿಸತಕ್ಕದ್ದು. ಭಾವೋದ್ವೇಗದ ಮತ್ತು ದೈಹೀಕವಾದಂಥ ವ್ಯತ್ಯಾಸಗಳನ್ನು ಪರಸ್ಪರವಾಗಿ ಗೌರವಿಸುವುದೇ ಇದರ ತಾತ್ಪರ್ಯವಾಗಿರುವದರಿಂದ ಅದನ್ನು ಹಿಂಬಾಲಿಸಲು ಪೇತ್ರನು ತನ್ನ ಓದುಗರಿಗೆ ತಿಳಿಸುತ್ತಿದ್ದಾನೆ.

## ಶಾಂತ ಮನಸ್ಸೆಂಬ ಒಳಗಣ ಭೂಷಣ (3:1-4)

3:1-6ರವರಗೆ ಪೇತ್ರನು ಸ್ತ್ರೀಯರ ಕುರಿತಾಗಿ ಬರೆದಿದ್ದಾನೆ, ನಂತರ 3:7ರಲ್ಲಿ ಪುರುಷರ ಕುರಿತಾಗಿ ಬರೆದಿರುವನು. ಅಸಮಾನತೆಯು ಸಾಮಾನ್ಯವಾದದ್ದೇ, ಆದರೆ ಯಾರಿಗಾಗಿ ನಿಯಮಿಸಲಾಗಿದೆ ಎಂದು ನಿರ್ಣಯಿಸುವುದು ಸರಳವಾದದ್ದಲ್ಲ. ದೇವರ ಅಪ್ಪಣೆಗಳು ಶಿಸ್ತಿನವು ಮತ್ತು ಬಾರವಾದದ್ದು ಎಂದು ನಾವು ತಿಳಿದರೆ ಬಹುಶಃ ಪೇತ್ರನು ಪುರುಷರ ಪರವಾಗಿಯೇ ಇರುವನು ಎಂದು ತಿಳಿಯುತ್ತೇವೆ. ಇನ್ನೊಂದು ಕಡೆ, ದೇವರ ವಾಕ್ಯವು ದೈವೀಕ ಸಲಹೆಗಳು ಪರಿಶುದ್ಧಾತ್ಮ ಮೂಲಕವಾಗಿ: ಪೇತ್ರನ ಓದುಗರಿಗೆ ಲಾಭದಾಯಕವಾಗಿತ್ತು ಎಂದು ನಾವು ಒಪ್ಪಿದರೆ, ಪೇತ್ರನು ಸ್ತ್ರೀಯರ ಪರವಾಗಿದ್ದನು ಎಂದು ತಿಳಿಯುತ್ತೇವೆ. ಅವನು ಸ್ತ್ರೀಯರಿಗಾಗಿ ನೀಡಿದ ಸಲಹೆಗಳನ್ನು ನಾಲ್ಕು ಸಂಕ್ಷಿಪ್ತ ಪಾಠಗಳನ್ನಾಗಿಸಿದ್ದಾನೆ.

### ಅಧೀನತೆ

"ಅದೇ ರೀತಿಯಾಗಿ ಸ್ತ್ರೀಯರೇ, ನಿಮ್ಮ ಗಂಡಂದಿರಿಗೆ ಅಧೀನರಾಗಿರಿ ಎಂದು ಪೇತ್ರನು ಪ್ರಾರಂಭಿಸಿದ್ದಾನೆ" (3:1). ಈ ಮುಂಚೆ ಪೇತ್ರನು ಕ್ರೈಸ್ತರು ತಮ್ಮ ಮೇಲಿನ ಅಧಿಕಾರಕ್ಕೆ

ಅಧೀನರಾಗಿರಬೇಕು ಎಂದು ಎಚ್ಚರಿಸಿದ್ದನು (2:13), ಗುಲಾಮರು ತಮ್ಮ ಯಜಮಾನರಿಗೆ ಅಧೀನರಾಗಿರಬೇಕು ಎಂದು ಸಹ ತಿಳಿಸಿದ್ದನು (2:18). "ಅದೇ ರೀತಿಯಲ್ಲಿ" ಎಂಬ ವ್ಯಾಖ್ಯಾನವು, ಹಿಂದಿನ ವಚನದಲ್ಲಿ ಹೆಂಡತಿಯರಿಗೆ ನೀಡಿದ ಎಚ್ಚರಿಕೆಯ ಮಾತುಗಳ ಬಳಿಗೆ ಸೆಳೆದು ಅದರ ಮುಂದುವರಿದ ಆಲೋಚನೆಗಳನ್ನು ತಿಳಿಸುತ್ತದೆ. ಅಧೀನತೆಯು ಜೀವನದ ಒಂದು ಭಾಗವಾಗಿದೆ. ಯಾವುದೇ ಕ್ರಿಯೆಗಳಲ್ಲಿ ಒಬ್ಬನಿಗಿಂತಲೂ ಹೆಚ್ಚು ಇರುವುದಾದರೆ, ಅದರಲ್ಲಿ ಯಾರಾದರು ಒಬ್ಬರು ಮೇಲ್ವಿ ಚಾರಕರಾಗಿರುತ್ತಾರೆ. ಅಧೀಕಾರದಲ್ಲಿರುವ ವ್ಯಕ್ತಿ ಒಂದು ವೇಳೆ ಉತ್ತಮನು ಅಥವಾ ಉತ್ತಮನಾಗದೆಯೂ ಇರಬಹುದು, ಆದರೆ ಉತ್ತಮರಾದ ಎರಡನೇ ಅಥವಾ ಮೂರನೇ ವ್ಯಕ್ತಿಯು ಇರುವುದು ಒಳ್ಳೆಯದು. ಇಲ್ಲದೆ ಹೋದರೆ ಯಾವುದೇ ಮಾರ್ಗದರ್ಶನವು ದೊರಕಲಾರದು.

ಅಧೀನತೆ ಇಲ್ಲದ ಹೊರತು, ಅಧಿಕಾರವು ಇರಲಾರದು. ಅಧೀನತೆಯ ಆಯ್ಕೆ ಮಾಡಲು ಹೆಂಡತಿಯರಿಗೆ ಅವಕಾಶ ನೀಡಲಾಗಿತ್ತು ಎಂಬ ಯೋಚನೆ ಪೇತ್ರನದಾಗಿರಬಹುದು. ನನಗೆ ತಿಳಿದಿರುವ ಕೆಲವು ಕುಟುಂಬಗಳಲ್ಲಿ, ಹೆಂಡತಿಯರಿಗೆ ಈ ಅವಕಾಶಗಳಿರುವದಿಲ್ಲ. ಹೆಂಡತಿ ಅಧೀನಳಾಗಿದ್ದಳು, ಅಥವಾ ಗಂಡನನ್ನು ನ್ಯಾಯಾಲಯಕ್ಕೆ ಹೊಯ್ದಿದ್ದಳು. ಗಂಡನಿಗೆ ಅಧೀನವಾ ಗುವಂತ ಹೆಂಡತಿಯನ್ನು ಹೊಂದಿರುವವನು ಧನ್ಯನು. ಪೇತ್ರನು ಹೆಂಡತಿಯ ಕುರಿತು "ಅಧೀನರಾಗಿರಬೇಕು" ಎಂದು ಹೇಳಿರುವ ಅರ್ಥವೇನೆಂದರೆ, "ನಿನ್ನ ಗಂಡನನ್ನು ಕುಟುಂಬದ ನಾಯಕನಾಗುವದಕ್ಕೆ ಅವಕಾಶ ಮಾಡಿಕೊಡು." ಎಂಬುದಾಗಿ ಒಂದು ವೇಳೆ ಹೆಂಡತಿಯು ಈ ಅವಕಾಶವನ್ನು ನೀಡದೆ ಹೋದರೆ, ಆ ಕ್ರೈಸ್ತ ಮನುಷ್ಯನಿಗೆ ನಾಯಕನಾಗಿರಲು ಕಷ್ಟವಾ ಗುತ್ತದೆ.

ಅಧಿಕಾರಕ್ಕೆ, ಯಜಮಾನರಿಗೆ, ಅಥವಾ ಗಂಡನಿಗೆ ಅಧೀನನಾಗು ಎಂದರೆ, ಕಾರ್ಯಗಳಲ್ಲಿ ಕ್ರಮವಾದ ಪಾತ್ರವಿದೆ ಎಂದು ಒಪ್ಪಿಕೊಳ್ಳುವದಾಗಿದೆ. ಅದು ಒಬ್ಬರ ಬುದ್ಧಿ, ಯೋಗ್ಯತೆ ಅಥವಾ ಸಾಮರ್ಥ್ಯದ ಕ್ರಯವಾಗಿರುತ್ತದೆ. ಪೇತ್ರನು ಹೇಳಿದ್ದೇನೆಂದರೆ ಹೆಂಡತಿಯು ಗಂಡನಿಗೆ ಅಧೀನಳಾಗಿರಬೇಕು. ಇಲ್ಲಿ ಗಂಡನು ಕ್ರೆಸ್ತನಾಗಿರಲಿಲ್ಲ ಎಂಬುದಾಗಿ ಊಹಿಸಿಕೊಳ್ಳಬೇಕು ಕ್ರೈಸ್ತರ ಒಳ್ಳೆಯ ನಡವಳಿಕೆ ಮತ್ತು ಅಧೀನತೆಯ ಮುಖಾಂತರ, ಅನ್ಯರು ದೇವರನ್ನು ಘನ ಪಡಿಸುವರು (2:12) ಮತ್ತು ಮೂಡರ ಬಾಯನ್ನು ಕಟ್ಟಿ ಹಾಕುವರು (2:15), ಈ ಅದೀನತೆಯ ಸ್ವಭಾವದ ಪ್ರಭಾವವು ತಮ್ಮ ಗಂಡಂದಿರನ್ನು ಕ್ರಿಸ್ತನ ಬಳಿಗೆ ನಡಿಸುತ್ತದೆ. ಪೇತ್ರನ ಓದುಗರಲ್ಲಿ ಇದು ಸಹಜವಾದ ಸತ್ಯವಾಗಿತ್ತು. ಈ ದಿವಸಗಳಲ್ಲಿರುವಂತೆ, ಪುರುಷರಿಗಿಂತ ಸ್ತ್ರೀಯರು ವೇಗವಾಗಿ ದೇವರ ಪ್ರೀತಿಯ ವಾಕ್ಯಕ್ಕೆ ಮತ್ತು ಕೃಪೆಗೂ ಕಿವಿಗೊಡುತ್ತಿದ್ದರು. ಹೆಂಡತಿಯರಲ್ಲಿರುವಂಥ ಕ್ರೈಸ್ತ ಅಧೀನತೆಯ ಫಲದ ಮೂಲಕವಾಗಿ, ಅನೇಕ ಗಂಡಂದಿರು ಪರಲೋಕದಲ್ಲಿ ಸಂತೋಷದ ನಿತ್ಯತ್ವವನ್ನು ಹೊಂದುತ್ತಾರೆ.

**ಶುಧ್ಧತೆ**

3:2ರಲ್ಲಿ, ಗಂಡಂದಿರಿಗೆ ಹೆಂಡತಿಯರಿಂದ ಉಂಟಾದ ಪ್ರಭಾವದ ಕುರಿತಾಗಿ ವಿವರಿಸಲಾಗಿದೆ: "ನೀವು ನಿರ್ಮಲರಾಗಿಯೂ ಭಯಭರಿತರಾಗಿಯೂ ನಡೆದುಕೊಳ್ಳು ವದನ್ನು ನೋಡಿ." ಎಂಬ ಅವರ ನಡತೆಯ ಬಗ್ಗೆ ಪೇತ್ರನು ವಿವರಿಸುತ್ತಿದ್ದನು. NIVಯಲ್ಲಿ "ನಿಮ್ಮ ನಿರ್ಮಲತ್ವವನ್ನು ... ಗಮನಿಸಿ" ಶುದ್ಧವಾದ ಜೀವಿತವು, ಮರ್ಯಾದೆಗೆಟ್ಟ ಹಾಗೂ ಅಕ್ರಮವಾದ ವಿಷಯಗಳಿಂದ ಪ್ರತ್ಯೇಕವಾಗಿರುತ್ತದೆ. ಒಂದು ವೇಳೆ ಇದು ಪಕ್ಷಪಾತವಾಗ ಬಹುದು, ಪರುಷರು ಸ್ತ್ರೀಯರಲ್ಲಿ ಅಸಾಧ್ಯವಾದ ನಡತೆಯನ್ನು ನೋಡಲು ಇಷ್ಟಪಡುತ್ತಾರೆ. ಅವರ ಹೆಂಡತಿಯರಲ್ಲಿ, ತಾಯಿಯರಲ್ಲಿ, ಮತ್ತು ಸಹೋದರಿಯರಲ್ಲಿ ವರ್ಚಸನ್ನು, ಶುದ್ಧ ತೆಯನ್ನು ಬಯಸುತ್ತಾರೆ. ನೀನು ಇಚ್ಚಿಸಿದರೆ ಅದು ಪುರುಷರ ಅಭಿಮಾನವು ಆಗಿರಬಹುದು, ಆದರೆ ಯಾವ ಸ್ತ್ರೀಯು ತನ್ನ ಪ್ರೀತಿ ಆಧರಣೆಗಳನ್ನು ಒಬ್ಬನೇ ಪುರುಷನಿಗೆ ಮಿಸಲಿಡುತ್ತಾಳೋ,

ಅಂಥ ಸ್ತ್ರೀಯನ್ನು ಪುರುಷರು ಗೌರವಿಸುತ್ತಾರೆ.

ಆಲೆನ್ ಬ್ಲೂಮ್, ಎಂಬ ಮಾನವೀಯತೆಯ ಅಧ್ಯಾಪಕರು, ಯೂನಿವರ್ಸಿಟಿ ಆಫ್ ಚಿಕಾಗೋ, ಮಾರಾಟವಾದ ಅವರ ಉತ್ತಮ ಪುಸ್ತಕದಿಂದ, ಕೆಲವಾರು ವರುಷಗಳ ಹಿಂದೆ ಒಂದು ಹೇಳಿಕೆಯನ್ನು ನೀಡಿದ್ದಾರೆ:

> ದಣಿವಾದ ಮತ್ತು ಮೂರ್ಖರಾದ ತಾಯಿ ಮತ್ತು ತಂದೆಯರು, ತಮ್ಮ ಹೆಣ್ಣು ಮಕ್ಕಳಿಗೆ ಈ ಕೆಳಕಂಡಂತೆ ಬೋಧಿಸಿರುವದು ಆಶ್ಚರ್ಯವುಂಟು ಮಾಡುತ್ತದೆ - "ಅವನ ಎಲ್ಲಾ ಅವಶ್ಯ ಕಥೆಗಳನ್ನು ಅವನ ಕೊರತೆಗಳನ್ನು ಸುಲಭವಾಗಿ ನೀವು ಪೂರೈಸುವುದಾದರೆ, ಅವನು ನಿನ್ನನ್ನು ಗೌರವಿಸುವದಿಲ್ಲ ಮತ್ತು ಮದುವೆಯಾಗುವದಿಲ್ಲ" - ಇದು ಈ ವರ್ತಮಾನಕಾಲದ, ಸತ್ಯವಾದ ಮತ್ತು ಅತಿಯಾಗಿ ವಿಶ್ಲೇಸಿದ ಸಂಗತಿಯಾಗಿರುತ್ತದೆ.[1]

ಒಂದು ವೇಳೆ ಇದು ಧಣಿವಾದ ಹಾಗೂ "ಮೂರ್ಖತನದ ವಿಷಯವಾಗಿರಲೀ, ಅಥವಾ ವಿಷಯವಾಗದೇ ಇರಲೀ," ಆದರೆ ಈ ಬೋಧನೆಯು ಪ್ರಶ್ನಾರ್ಥಕವಾಗಿದೆ. ಯಾವಾಗ ಸ್ತ್ರೀಯರು, ತಮ್ಮ ಶುದ್ಧತೆಯ ಜೀವಿತದಲ್ಲಿ ಸೋತುಹೋಗುತ್ತಾರೋ, ಅದು ಆಸಕ್ತಿಕರವಾದ ಗ್ರಹಿಕೆಯಾಗಿರುತ್ತದೆ. ಒಬ್ಬ ಸ್ತ್ರೀಯು ತನ್ನ ಶುದ್ಧತೆಯ ಜೀವಿತದ ಮುಖಾಂತರ ತನ್ನ ಯಜಮಾನನ ಗೌರವಕ್ಕೂ ಮತ್ತು ಮೆಚ್ಚುಗೆಗು ಪಾತ್ರಳಾಗುತ್ತಾಳೆ.

### ಸನ್ಮಾನ

ಸ್ತ್ರೀಯು, ತನ್ನ ನಂಬಿಕೆಯಿಲ್ಲದ ಗಂಡನನ್ನು ತಾನು ಸನ್ಮಾನಿಸುವದರಿಂದ ಅವನನ್ನು ಕ್ರಿಸ್ತನ ಬಳಿಗೆ ನಡೆಸುತ್ತಾಳೆ. ಗ್ರೀಕ್ ಭಾಷೆಯಲ್ಲಿ ಇದನ್ನು "ಗೌರವ" ಎಂದು "ತರ್ಜುಮೆಮಾಡಲಾಗಿದೆ" ವಚನ 2 ("ಸನ್ಮಾನ," NIV) ಅಕ್ಷರಶಃ "ಭಯ," ಅಂದರೆ ದೇವರ ಮುಂದೆ ದೀನರಾಗಿಯೂ, ಮತ್ತು ಗೌರವದಿಂದಲೂ ನಿಲ್ಲುವಂತೆ, ಹೆಂಡತಿಯು ಈ ಸನ್ಮಾನ ಎಂಬ ವಿಷಯವನ್ನು ತನ್ನ ಇಷ್ಟದ ಪ್ರಕಾರ ಬಳಸಿಕೊಳ್ಳ ಬಹುದು ಎಂಬುದಾಗಿ ಅಲ್ಲ. ಸ್ತ್ರೀ, ತನ್ನ ಕರುಣೆಯನ್ನು ಕಾರ್ಯತಂತ್ರವನ್ನು ಭಾನುವಾರಕ್ಕಾಗಿ ಮಾತ್ರ ಸೀಮಿತ ಪಡಿಸಿಕೊಳ್ಳುತ್ತಾಳೆ ಎಂಬುದಾಗಿ ಇರುವದಿಲ್ಲ. ಸನ್ಮಾನದ ಕೊರತೆಯು ಒಂದು ವಿಷಯವೇ. ಅವರ ಭಾಷೆಯಲ್ಲಿಯೂ, ಸಾದುತ್ವದಲ್ಲಿಯೂ, ಪ್ರಾರ್ಥನೆ ಮತ್ತು ಕ್ರೈಸ್ತ ಪ್ರೀತಿಯಲ್ಲಿಯೂ ಭಯ ಇರಬೇಕು ಎಂದು ದೇವರು ನಿಯಮಿಸಿರುವದರಿಂದ, ಇದನ್ನು ಹೆಂಡತಿಯು ತನ್ನ ವೈಯಕ್ತಿಕ ಜೀವಿತದಲ್ಲಿಯೂ, ಮತ್ತು ಸಾರ್ವತ್ರಿಕ ಜೀವಿತದಲ್ಲಿಯೂ ಪ್ರಾಯೋಜಿಸುತ್ತಾಳೆ.

### ಅಂತರಂಗದ ಭೂಷಣ

ಪೇತ್ರನು, "ಜಡೆ ಹೆಣೆದುಕೊಳ್ಳುವದು ಚಿನ್ನದ ಒಡವೆಗಳನ್ನು ಇಟ್ಟುಕೊಳ್ಳುವುದು ವಸ್ತ್ರಗಳನ್ನು ಧರಿಸಿಕೊಳ್ಳುವದು ಈ ಮೊದಲಾದ ಹೊರಗಣ ಶೃಂಗಾರವೇ ನಿಮ್ಮ ಅಲಂಕಾರವಾಗಿರಬಾರದು" (3:3). ಎಂಬ ಹೇಳಿಕೆಯಿಂದ ಅವರು ತಮ್ಮ ತಲೆಗಳನ್ನು ಬಾಚಿಕೊಳ್ಳಬಾರದು ಅಥವಾ ಒಡವೆಗಳನ್ನು ಇಟ್ಟು ಕೊಳ್ಳಬಾರದು ಎಂದು ಶಿಫಾರಸ್ಸು ಮಾಡುತ್ತಿರುವದಿಲ್ಲ. ಅವರು ಕ್ರಮವಾಗಿಯೂ, ಮತ್ತು ಸಮತೋಲನವಾಗಿಯೂ ಇರಬೇಕೆಂದು ತಿಳಿಸುತ್ತಿದ್ದಾನೆ, ದಪ್ಪವಾಗಿಯು, ಆಕರ್ಷಣೀಯವಾಗಿಯು ಇರುವಂಥದ್ದನ್ನು ಬಯಸಬಹುದು, ಆದರೆ ಶಾಶ್ವತವಾದ ಮತ್ತು ಸಾತ್ವೀಕ ಶಾಂತಮನಸ್ಸನ್ನು ಅಲಕ್ಷಿಸಿ, ವಸ್ತ್ರಗಳ, ಒಡವೆಗಳ ಮತ್ತು ಜಡೆ ಹೆಣೆದು ಕೊಳ್ಳುವ ವಿಷಯಗಳಿಗೆ ಹೆಚ್ಚು ಮಹತ್ವ ನೀಡುವುದು ಆತ್ಮಿಕವಾದ ಆತ್ಮಹತ್ಯವೆ ಹೆಂಡತಿಯು ತಾನು ನಡಕೊಳ್ಳುವ ನಡವಳಿಕೆಯ ಮುಖಾಂತರ ತನ್ನ ಗಂಡನೊಂದಿಗೆ ಹೆಚ್ಚು

ಸಂಪರ್ಕವನ್ನು ಹೊಂದುತ್ತಾಳೆ. ಆಕೆಯ ತೋರಿಕೆಯು ಕೇವಲ ದೈಹೀಕವಾಗಿ ಮಾತ್ರ ಇದ್ದರೆ, ಆಕೆಯು ತನ್ನ ಗಂಡನ ಹೃದಯವನ್ನು ಕರ್ತನ ಕಡೆಗೆ ತಿರುಗಿಸಲು ಸಾಧ್ಯವಿಲ್ಲ. ಆದರೆ ಆಕೆಯಲ್ಲಿರುವ ಕ್ರಿಸ್ತನ ಸದ್ಗುಣಗಳು, ಆಕೆಯ ಸಾತ್ವಿಕವಾದ ಶಾಂತ ಮನಸ್ಸು, ಸನ್ಮಾನ ಮತ್ತು ಶುದ್ಧತೆಯು ನಿರಂತರವಾದ ಪರಿಣಾಮವನ್ನು ಬೀರುತ್ತದೆ.

ಇಲ್ಲಿ ಪೇತ್ರನು, ಗಂಡನು ದೇವರಿಗೆ ವಿಧೇಯನಾಗುವ ಜವಾಬ್ದಾರಿಯನ್ನು ಹೆಂಡತಿಯ ಭುಜದ ಮೇಲೆ ಹೇರಲಾಗುತ್ತಿಲ್ಲ, ಇದನ್ನು ನಾವು ಗಂಭೀರವಾಗಿ ಅರ್ಥೈಸಿಕೊಳ್ಳಬೇಕು. ಕೆಲವು ಪುರುಷರು ದುಷ್ಟರಾಗಿದ್ದು, ಮತ್ತು ಕೆಲವರು ವ್ಯತ್ಯಾಸವುಳ್ಳವರಾಗಿರುವದರಿಂದ, ಅವರ ಹೆಂಡತಿಯರು ಮಾಡುವ ಯಾವುದೇ ಕ್ರಿಯೆಗಳು ಅವರಲ್ಲಿ ವ್ಯತ್ಯಾಸವನ್ನು ಉಂಟುಮಾಡುವದಿಲ್ಲ. ಇಲ್ಲಿ ಪೇತ್ರನು ಹೆಂಡತಿಯರನ್ನು ಜವಾಬ್ದಾರಿಯುತರನ್ನಾಗಿ ಪರಿಗಣಿಸುತ್ತಿರುವದಿಲ್ಲ. ಅವನು ಹೇಳುವದೇನೆಂದರೆ ಮನಸ್ಸಾಕ್ಷಿಯುಳ್ಳ ಮತ್ತು ದೈವ ಭಕ್ತೆಯರಾದ ಹೆಂಡತಿಯರು ತಮ್ಮೊಂದಿಗೆ ಗಂಡಂದಿರೂ ಸಹ ನಂಬಿಕೆ ಮತ್ತು ನಿರೀಕ್ಷೆಯಲ್ಲಿ ಪಾಲು ತೆಗೆಯ ಬೇಕೆಂದು ಇಷ್ಟಪಡುತ್ತಾರೆ. ಈ ಕುರಿತಾಗಿ ಪೇತ್ರನು ತನ್ನ ಸಲಹೆಗಳನ್ನು ಹಂಚಿಕೊಂಡನು.

ಪೇತ್ರನು ಸ್ತ್ರೀಯರು ಅಸಾಧಾರಣವಾದ ಉತ್ತಮ ತೀರ್ಪನ್ನು ಮಾಡುವಂತೆ, ಕರೆಯನ್ನು ನೀಡಿದನು, ಅವರು ಸಹಿಸುವದರಲ್ಲಿ ತಾಳ್ಮೆಯನ್ನು ಮತ್ತು ಉತ್ತಮ ನಡವಳಿಕೆಯನ್ನು ತೋರಲು ಕರೆ ನೀಡಿದನು. ವಿವೇಕಿಯಾದ ಹೆಂಡತಿಯಲ್ಲಿರುವ ಉತ್ತಮವಾದ ನಡವಳಿಕೆಯನ್ನು ಉತ್ತಮ ತೀರ್ಪನ್ನು, ಪೇತ್ರನೊಬ್ಬನೇ ಮೆಚ್ಚುಗೆ ವ್ಯಕ್ತಪಡಿಸದೆ ಅಲೆಕ್ಸಾಂಡರ್ ಪೋಪ್‌ರವರು ಸಹ ಈ ರೀತಿ ಬರೆದಿದ್ದಾರೆ.

> ಗಂಡನು ಸಮಾಧಾನವಾಗುವವರೆಗೆ ಉತ್ತರವನ್ನು ನೀಡಿದವಳು, ಅಥವಾ, ಅವನ ಮೇಲೆ ಅಧಿಕಾರ ನಡೆಸುವವಳು, ಆಕೆಯ ಅಧಿಕಾರ ನಡೆಸುವವಳಲ್ಲ ಎಂದು ತೋರಿ ಸಿಕೊಳ್ಳುವಳು; ಅದನ್ನು ಸ್ವೀಕರಿಸುವದರಲ್ಲಿ ಸಂತೋಷವನ್ನು ವ್ಯಕ್ತಪಡಿಸುವವಳು, ಅಧೀನತೆಯಿಂದ ಎಲ್ಲವನ್ನು, ಎದುರಿಸುವವಳು, ಆದಾಗ್ಯೂ ಅವಳ ವಿಧೇಯತೆಯಿಂದ, ಹರ್ಷವನ್ನು ಉಂಟುಮಾಡುವಳು.

ಅವರ ಬಾವೋದ್ವೇಗವು, ಬಹುಶಃ ಪೇತ್ರನ ಹೇಳಿಕೆಗಿಂತ ದೂರವಾಗಿರುವದಿಲ್ಲ.

## ಪರ್ವ ಕಾಲದಲ್ಲಿ ದೈವ ಭಕ್ತೆಯರಾಗಿದ್ದ ಸ್ತ್ರೀಯರ ಮಾದರಿ (3:5, 6)

ಮಾದರಿಯ ಶಕ್ತಿಯು ಏನು ಎಂಬುದಾಗಿ ಪೇತ್ರನು ತಿಳಿದಿದ್ದನು. ಯಜಮಾನರಿಂದ ಹಿಂಸೆಯನ್ನು ಮತ್ತು ನಿಂದೆಯನ್ನು ಅನುಭವಿಸಿದ್ದ ಗುಲಾಮರು ಗಳು, ಅವರ ಯಜಮಾನರುಗಳಿಗೆ ತಿರುಗಿ ಬೀಳುವ ಸಂದರ್ಭವಿದ್ದದ್ದರಿಂದ, ಪೇತ್ರನು ಗುಲಾಮರುಗಳಿಗೆ ಕ್ರಿಸ್ತನ ಮಾದರಿಯಾದ ಜೀವಿತವನ್ನು ಗಮನಿಸಿರಿ ಎಂದು ಸಲಹೆ ನೀಡಿದನು. ಕರ್ತನು ಅನ್ಯಾಯವಾಗಿ ಬಾಧೆಯನ್ನು ಅನುಭವಿಸಿದನು. ಯೇಸುವಿನ ಮಾದರಿಯ ಕುರಿತಾದ ಸಲಹೆಗಳು ಪೇತ್ರನಿಂದ, ಅವರಿಗೆ ತಿಳಿಸಲ್ಪಡುವಾಗ, ಪೂರ್ವಕಾಲದ ಸ್ತ್ರೀಯರು ಹೆಂಡತಿಯರಿಗೆ ನೀಡಿದ ಸಲಹೆ, ಅವರು ತಮ್ಮನ್ನು ಸಾತ್ವಿಕವಾದ ಶಾಂತ ಮನಸ್ಸಿನಿಂದ ಅಲಂಕರಿಸಿಕೊಂಡರು, ಮತ್ತು ಅವರು ದೇವರನ್ನು ನಿರೀಕ್ಷಿಸಿಕೊಂಡಿದ್ದರು, ಮತ್ತು ಈ ಸಂಗತಿಗಳಿಂದ ತಮ್ಮನ್ನು ಅಲಂಕರಿಸಿಕೊಂಡರು. ಪ್ರತಿರೋಧವಾಗಿ ತಿಳಿಸಿದ್ದೇನೆಂದರೆ, ಅವರು ತಮ್ಮ ಒಡವೆಗಳಲ್ಲಿಯಾಗಲಿ, ವಸ್ತ್ರಗಳು, ಮತ್ತು ಜಡೆ ಹೆಣೆದುಕೊಳ್ಳುವದರಿಂದ ಸೌಂದರ್ಯ ಉಳ್ಳವರಾಗಿರಲಿಲ್ಲ.

ದೈವ ಭಕ್ತೆಯರ ಕುರಿತಾಗಿ, ಬೈಬಲ್ ತಿಳಿಸುತ್ತದೆ ಸಾರಳು, ರೆಬೆಕ್ಕಳು, ಲೇಯಳು

ಮತ್ತು ರಾಹೇಲಳು, ಅವರ ಗಂಡಂದಿರ ಅಲೆಮಾರಿ ಜೀವಿತಗಳಲ್ಲಿ ಪಾಲುಗಾರರಾಗಿದ್ದರು ಮತ್ತು ಅವರೊಂದಿಗೆ ದೇವರ ವಾಗ್ದಾನಗಳನ್ನೇ ಅವಲಂಭಿಸಿದ್ದರು. KJV ಇಬ್ರಿಯ 11:11ರ ಭಾವೋದ್ವೇಗವನ್ನು ಕೆಲವರು ಚರ್ಚಿಸಬಹುದು, ಇತರೆ ಹಿನ್ನೆಲೆಯ ಈ ವ್ಯಾಖ್ಯಾನವು ಇತರ ತರ್ಜುಮೆಗಳನ್ನು ಗಮನಿಸುವಂತಿದೆ: "ನಂಬಿಕೆಯ ಮುಖಾಂತರ ಸಾರಳು ಗರ್ಭಧರಿಸಿದಳು, ಮತ್ತು ಆಕೆಯ ಮುಪ್ಪಿನ ಪ್ರಾಯದಲ್ಲಿ ಮಗುವನ್ನು ಹೆತ್ತಳು, ಯಾಕೆಂದರೆ ವಾಗ್ದಾನ ಮಾಡಿದಾತನು ನಂಬಿಗಸ್ತನು ಎಂದು ತಿಳಿದಿದ್ದಳು." ಸಾರಳ ನಂತರ ವಾಗ್ದಾನದ ಸಂತತಿಯಾದ ಯಾಕೋಬನಿಗೆ ರೆಬೆಕ್ಕಳು ಬಲವಾದಳು. ನಂತರ, ಮೂಲಪಿತೃಗಳು ತಮ್ಮ ಸ್ವದೇಶಕ್ಕೆ ಹೊರಡಲು ಅಣಿಯಾಗುವಾಗ, ಯಾಕೋಬನ ಹೆಂಡತಿಯರು, ತಮ್ಮ ತಂದೆಯರಿಗಿಂತಲೂ, ತಮ್ಮ ಗಂಡಂದಿರಿಗೆ ಪ್ರೋತ್ಸಾಹ ನೀಡಿದರು (ಆದಿಕಾಂಡ 31:14-17).

ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟು ಹೊರಡುವಾಗ, ಮೋಶೆಯ ಸಹೋದರಿಯಾದ ಮಿರ್ಯಾಮಳು, ಆರೋನನ ಜೊತೆಯಲ್ಲಿ ನಾಯಕತ್ವವನ್ನು ವಹಿಸಿದ್ದಳು. ಯೆರಿಕೋ ಪಟ್ಟಣದ ಸೂಳೆಯಾದ ರಾಹಾಬಳು, ಇಸ್ರಾಯೇಲಿನ ಗುಡಾಚಾರರು ಕಾನಾನಿಗೆ ಬಂದಾಗ, ಅವರಿಗೆ ಸಹಾಯಿಸಿದ್ದಳು. ಆಕೆಯ ಹೆಸರು ನಂಬಿಕೆ ಇಟ್ಟವರ ಪಟ್ಟಿಯಲ್ಲಿ (ಇಬ್ರಿಯ 11:31), ಮಾತ್ರ ಕಾಣಿಸಿಕೊಳ್ಳದೆ, ಕರ್ತನ ವಂಶಾವಳಿಯಲ್ಲಿಯೂ (ಮತ್ತಾಯ 1:5) ಕಾಣಿಸಿಕೊಂಡಿದೆ. ನ್ಯಾಯಸ್ಥಾಪಕರುಗಳಲ್ಲಿ, ದೆಬೋರಳು ಬಲವುಳ್ಳವಳಾಗಿದ್ದಳು. ನ್ಯಾಯಸ್ಥಾಪಕರು 5ನೇ ಅಧ್ಯಾಯದಲ್ಲಿ ಆಕೆಯು ಬರೆದ ಗೀತೆಯು, ಹಳೇ ಒಡಂಬಡಿಕೆಯ ಉತ್ತಮ ಬರವಣಿಗೆಯಾಗಿದೆ. ನವೊಮಿ ಮತ್ತು ರೂತಳ ಸಮರ್ಪಣೆ, ಅಭಿಗೈಲಳ ಜ್ಞಾನ ಮತ್ತು ಚತುರತೆ (1 ಸಮುವೇಲ 25), ಎಸ್ತೆರಳ ಧೈರ್ಯ ಮತ್ತು ನಂಬಿಕೆ, ಇವೆಲ್ಲವು ಹಳೇ ಒಡಂಬಡಿಕೆಯಲ್ಲಿರುವ ದೇವರ ಒಡನಾಟದ ಕುರಿತು ತಿಳಿಸುತ್ತವೆ.

ನಂಬಿಗಸ್ತಿಕೆ ಮತ್ತು ಸಮರ್ಪಣೆಯ ಜೀವಿತವನ್ನು ಹೊಂದಿದ ದೃಷ್ಟಾಂತಗಳು ಹಳೇ ಒಡಂಬಡಿಕೆಗೆ ಮಾತ್ರ ಸೀಮಿತವಾಗಲಿಲ್ಲ. ಮರಿಯಳಿಂದ ಎಲಿಜಬೇತಳವರೆಗೂ, ದೋರ್ಕಳಿಂದ ಮತ್ತು ಪ್ರಿಸ್ಕಿಲ್ಲಳವರೆಗೂ ಕ್ರೈಸ್ತ ಭಕ್ತೆಯರ ನಂಬಿಕೆ ಮತ್ತು ಕ್ರಿಯೆಗಳು ಹೊಸ ಒಡಂಬಡಿಕೆಯಲ್ಲೂ ಮುಂದುವರಿಯುತ್ತವೆ. ಪೇತ್ರನು ಸ್ತ್ರೀಯರ ಕುರಿತು ಬರೆಯುವಾಗ ಇದರ ಹಿಂದೆ ಇದ್ದಂಥ ಮಹಾಸಮೂಹವನ್ನೆ ನೋಡುತ್ತೇವೆ. "ಪೂರ್ವಕಾಲದಲ್ಲಿ ದೇವರ ಮೇಲೆ ನಿರೀಕ್ಷೆ ಇಟ್ಟ ಭಕ್ತೆಯರಾದ ಸ್ತ್ರೀಯರು ಸಹ ಹಿಗೆಯೇ ತಮ್ಮನ್ನು ಅಲಂಕರಿಸಿಕೊಂಡಿದ್ದರು" (3:5).

ಈ ಪರಿಶುದ್ಧ ಸ್ತ್ರೀಯರು ತಮ್ಮ ಗಂಡಂದಿರಿಗೆ ಅಧೀನವಾದ ವಿಷಯವು, ಅವರ ನಂಬಿಗಸ್ತಿಗೆಗೆ ದಾಖಲಾಗಿರುತ್ತದೆ. ಅಧೀನತೆಗೆ ಸ್ವತಂತ್ರವಾಗಿ ಒಳಗಾಗುವದು ಕೀಳರಿಮೆಯಾಗಿರುವದಿಲ್ಲ. ಸಾರಳು ತನ್ನ ಗಂಡನನ್ನು ಅತಿಗೌರವದಿಂದ ಕರೆದಳು. ಕ್ರೈಸ್ತ ಸ್ತ್ರೀಯರು ತಮ್ಮ ಗಂಡಂದಿರಿಗೆ ಅಧೀನರಾಗುವಾಗ, ಅವರು ನಂಬಿಗಸ್ತಳಾದ ಸಾರಳ ಆತ್ಮೀಕ ಕುಮಾರ್ತೆಯರಾಗುತ್ತಾರೆ.

## ಮನುಷ್ಯರಂತೆ ವರ್ತಿಸಿ ಮತ್ತು ಗೌರವಿಸಿ (3:7)

ಬೈಬಲ್‌ನ ಸಲಹೆಗಳನ್ನು ಸರಿಯಾದ ರೀತಿಯಲ್ಲಿ ಪರಿಗಣಿಸಿದರೆ, ಅದು ಓದುಗರ ಹೃದಯವನ್ನು ಪರೀಕ್ಷಿಸಿ, ಅವರ ಜೀವಿತವನ್ನು ಪ್ರಯೋಜನಕಾರಿಯಾಗಿ ಮಾಡುತ್ತದೆ. ದೇವರ ವಾಕ್ಯವನ್ನು ಪ್ರಯೋಗಿಸಿ, ತಮ್ಮ ಬೆರಳನ್ನು ತೋರಿಸಿ, ಸಣ್ಣತನವನ್ನು ತೋರಿಸಿ, ಖಂಡಿಸುವವರಲ್ಲಿ ಒಂದು ವಿಧವಾದ ಭಯಾನಕ ಕಾರ್ಯವು ನಡೆದಿರುತ್ತದೆ. ಕೆಲವು ದಿವಸಗಳ ಹಿಂದೆ ಯಾಕೋಬ 2ರಲ್ಲಿರುವ ನಂಬಿಕೆ ಮತ್ತು ಕ್ರಿಯೆಯ ಕುರಿತಾದ ಚರ್ಚೆಯಲ್ಲಿ ನಾನೂ ಸಹ ಪಾಲುಗೊಂಡಿದ್ದೆ. ಆ ಒಂದು ತರಗತಿಯ ಸದಸ್ಯೆಯು ಕೆಲವಾರು ನಿಮಿಷಗಳು ಮಾತನಾಡಿ, ತನ್ನ ಸಂಬಂಧಿಗೆ ತಾನು ನೆನಸಿದ ರೀತಿಯಲ್ಲಿ ಸಭೆಯು ಸಹಾಯಿಸಲಿಲ್ಲ

ಎಂದು ಸಭೆಯನ್ನು ನಿಂದಿಸುತ್ತಿದ್ದಳು. ಆ ಪರಿಸ್ಥಿತಿಯ ಬಗ್ಗೆ ನನಗೆ ವಿಷಯವು ತಿಳಿದಿತ್ತು. ಅಲ್ಲಿ ಕೆಲವು ಸಹೃದಯರು, ಈಗಾಗಲೇ ವಿಶೇಷವಾದ ಸಹಾಯವನ್ನು ಮಾಡಿದ್ದರು, ಅದಕ್ಕೆ ಪ್ರತಿಯಾಗಿ ಅವರನ್ನು ಯಾರು ವಂದಿಸಿರಲಿಲ್ಲ, ಮತ್ತು ಅವರು ನಿಂದೆಗೆ ಒಳಗಾಗಿದ್ದರು. ಒಂದು ವೇಳೆ ಸಭೆಯು ವಿಫಲವಾಗಿದ್ದರೂ (ಮಾನವ ನಿರ್ಮಿತ ಸಭೆಯಲ್ಲಿ ಈ ಕಾರ್ಯವಾಗ ಬಹುದು), ನಾವು ವಿಫಲತೆಯನ್ನು ತೋರಿಸಬೇಕು ಎಂದು, ವಾಕ್ಯವು ನಮಗೆ ಅನುಗ್ರಹವಾ ಗಿರುವದಿಲ್ಲ. ಪ್ರತಿಯೊಬ್ಬರು ಅದನ್ನು ತಮಗೆ ಅನ್ವಯಿಸಿಕೊಳ್ಳಬೇಕು ಪ್ರಶ್ನೆಯು, "ಯಾರು ವಿಫಲರು ಎಂಬುದಾಗಿಯಲ್ಲ; ನನ್ನನ್ನು - ಯಾರು ವಿಫಲ ಪಡಿಸಿದ್ದಾರೆ ಎಂಬುದಾಗಿ?" ಆದರೆ "ನಾನು ಎಲ್ಲಿ ವಿಫಲನಾದೆ, ಹೇಗೆ ದೇವರ ವಾಕ್ಯವು, ನನ್ನನ್ನು ನಡಿಸಿ, ಪ್ರಯೋಜ ನಕಾರಿಯಾದ ಸೇವಕನನ್ನಾಗಿ ಮಾಡುತ್ತದೆ?"

ಗಂಡ - ಹೆಂಡತಿಯರಿಬ್ಬರೂ 3:1-7 ವಚನಗಳನ್ನು ತಮ್ಮನ್ನು ನಾವೇ ಪರೀಕ್ಷಿಸಿಕೊಳ್ಳುವ ಆತ್ಮದಿಂದ ಓದಬೇಕು. 3:1-6 ಹೆಂಡತಿಯು ಓದುವ ಭಾಗವಾಗಿದ್ದು, ಈ ಅಪೋಸ್ತಲರು ನೀಡಿದ ಸಲಹೆಗಳಿಂದ, ಹೇಗೆ ಆಕೆಯು ದೈವ ಭಕ್ತಳಾಗಿ ಜೀವಿಸಬಹುದು ಎಂದು ತಿಳಿಸುತ್ತದೆ. 3:7 ಗಂಡನು ಓದುವ, ಭಾಗವಾಗಿದ್ದು, ಗಂಡಂದಿರು ಹೇಗೆ ಜೀವಿಸಬೇಕು ಎಂದು ಅಪೊಸ್ತಲರು ನೀಡಿದ ಸಲಹೆಗೆ ಅನುಗುಣವಾಗಿದೆಯೋ ಎಂದು ತಿಳಿದುಕೊಳ್ಳಬೇಕು. ಮೊದಲ ವಚನವನ್ನು ಮಾತ್ರ ಉಪಯೋಗಿಸಿ, ತನ್ನ ಹೆಂಡತಿಯನ್ನು ತಿದ್ದು ಪಾಟಿಗೆ ತರಲು ಪ್ರಯತ್ನಿಸಿದರೆ ಮತ್ತು ಹೆಂಡತಿಯು ವಚನ 7ನ್ನು ಉಪಯೋಗಿಸಿ, ತನ್ನ ಗಂಡನಲ್ಲಿಯೇ, ಸಮಸ್ಯೆಯು ಇರುತ್ತದೆ ಎಂದರೆ, ದೇವರ ವಾಕ್ಯವನ್ನು ತಪ್ಪಾಗಿ ಉಪಯೋಗಿಸುವವರಾಗಿರು ತ್ತೇವೆ. ಆಕೆಯು ಇಷ್ಟು ತೊಂದರೆ ನೀಡುವಾಗ ಹೇಗೆ ನಾವು ಉತ್ತಮನಾದ ಗಂಡನಾಗುವದಕ್ಕೆ ಸಾಧ್ಯವಾಗುತ್ತದೆ. ಮತ್ತು ಅಂಥ ಒಬ್ಬ ಹಾನಿಕರವಾದ ಗಂಡನ ಜೊತೆಯಲ್ಲಿ ಹೆಂಡತಿಯು ಹೇಗೆ ಸಂಸಾರ ಮಾಡಲು ಸಾಧ್ಯವಿದೆ? ಇಂಥ ತಿಳುವಳಿಕೆಗಳನ್ನು ಉಪಯೋಗಿಸುವದರಿಂದ ಪ್ರತಿಯೊಬ್ಬರು ಕಳೆದುಕೊಳ್ಳುತ್ತಾರೆ.

ಗಂಡನು ಹೆಂಡತಿಯನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಳ್ಳುವದಕ್ಕೆ ಅಪೊಸ್ತಲರು, ಮೂರು ಮನೋಭಾವನೆಗಳ ಮೂಲಕ ಮಾರ್ಗದರ್ಶನ ಮಾಡಿದ್ದಾರೆ. ಗಂಡಂದಿರ ಕರ್ತವ್ಯದ ಕುರಿತು ಪೇತ್ರನು ಅಲ್ಪವಾಗಿ ತಿಳಿಸಿರುವುದು ಸತ್ಯವೇ, ಆದರೆ ಗಂಡನು ಅಲ್ಲಿ ಅವನಿಗೆ ನೀಡಿರುವಂಥ ಗುಣಗಳನ್ನು ಅಳತೆ ಮಡಬಹುದು.

**ಪರೀಶೀಲನೆ – ಅಥವಾ ಪರಾಸಕ್ತಿ**

ನಾನು ಸ್ಥಳೀಯ ಪುಸ್ತಕದ ಅಂಗಡಿಯಲ್ಲಿ ವಿಷಯಗಳನ್ನು ಸಂಗ್ರಹಿಸುವಲ್ಲಿ ಸಂತೋಷ ಪಡುತ್ತೇನೆ, ಕೆಲವು ಸಾರಿ "ಮನಃಶಾಸ್ತ್ರದ" ಅಂದರೆ ಮದುವೆ ಮತ್ತು ಕುಟುಂಬದ ಸಂಬಂಧದ ಕುರಿತಾಗಿ ನೋಡುತ್ತೇನೆ. ಇದರ ಕುರಿತಾಗಿ ಅನೇಕ ಪುಸ್ತಕಗಳು ಮುದ್ರಿತವಾಗಿರುವುದು ಆಶ್ಚರ್ಯವೆ. ಯಶಸ್ಸಿನ ಕುರಿತು ಪ್ರತಿಯೊಬ್ಬರು ತಮ್ಮದೇ ಆದ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ. ಕಾಮ ಶಾಸ್ತ್ರದ ಕುರಿತು ಡಜನ್‌ಗಟ್ಟಲೆ ಪುಸ್ತಕಗಳು ಮುದ್ರಿತವಾಗಿವೆ, ಮತ್ತು ಅವುಗಳು ಉತ್ತಮವಾಗಿ ಮಾರಾಟವಾಗುತ್ತವೆ. ಚರ್ಚಾಸಭೆಗಳ ಕುರಿತಾಗಿ, ಸಮ್ಮೇಳನಗಳ ಕುರಿತು ಮತ್ತು ಇನ್ನೂ ಮುಂತಾದ ವಿಷಯಗಳ ಕುರಿತು ಬಹಳಷ್ಟು ಮಾಹಿತಿಗಳಿವೆ. ಯಾಕೆ ಕೆಲವರು ಮಾತ್ರ, ಸುಭದ್ರವಾದ, ಮತ್ತು ಪರಸ್ಪರ ತೃಪ್ತಿ ನೀಡುವ ಮದುವೆಯ ಕುರಿತು ಪರಿಪಕ್ವತೆಯನ್ನು ಹೊಂದಿರುತ್ತಾರೆ? ಅನೇಕ ಮದುವೆಗಳು ವಿಫಲವಾಗುವದಕ್ಕೆ ಕಾರಣಗಳು, ಯಾವವು ಎಂದು ನಾನು ಭಾವಿಸಿರುವ ಯೋಚನೆಗಳನ್ನು ತಿಳಿಸುತ್ತೇನೆ. ಯಾವುದೇ ಸೂತ್ರವು, ದೈವಾಜ್ಞೆಯು ನೀಡುವ ಪರಿಶೀಲನೆಗೆ ಪ್ರತಿಯಾಗಿರಲಾಗದು.

ಸಂಕ್ಷಿಪ್ತವಾಗಿ, ಗಂಡನು ತನ್ನ ಹೆಂಡತಿಯ ಕುರಿತಾಗಿ ಹೊಂದಿರುವ ಪರಿಶೀಲ ನೆಯು, ಆಕೆಯು ನಿನಗೆ ಏನೆಲ್ಲವನ್ನು ಮಾಡಬೇಕೆಂದು ಬಯಸುತ್ತಿಯೋ, ನೀನು ಅದನ್ನೆ

ಹೆಂಡತಿಗೆ ಮಾಡು. ಆಕೆಯ ಜನುಮದಿನದ ಬಗ್ಗೆ ತಿಳುಕೊಳ್ಳಬೇಕು, ಆಕೆಗೆ ಹೂವನ್ನು ನೀಡುವುದು, ಕಸವನ್ನು ತೆಗೆದುಕೊಳ್ಳದೆ ಇರುವುದು, ಬಹುದೂರವನ್ನು ನೀಡುವುದು, ಆಕೆಗೆ ಸಹಾಯಿಸುವುದು, ಸಾವಿರ ಕಾರ್ಯಗಳನ್ನು ಮಾಡಬಹುದು, ಪರಾಸಕ್ತಿ ಅಂದರೆ ಕೆಲವು ಸಾರಿ ಅವಳ ಆಸಕ್ತಿಗೆ ಅಧೀನನಾಗುವದು.

**ಗೌರವ**

ಅನೇಕ ಸಂದರ್ಭಗಳಲ್ಲಿ ಇರಾ ನಾರ್ತ್‌ರವರು ಬಲವಾದ ಕುಟುಂಬಗಳನ್ನು ಕಟ್ಟಲು ನೀಡಿರುವ ಸೂತ್ರಗಳ ಕುರಿತು ಕೇಳಿದ್ದೇನೆ. ಅವರು ಈ ರೀತಿಯಾದ ಹೇಳಿಕೆಯನ್ನು ನೀಡಿದ್ದಾರೆ: "ತಂದೆಗಳೇ, ನೀವು ನಿಮ್ಮ ಹೆಣ್ಣು ಮತ್ತು ಗಂಡು ಮಕ್ಕಳಿಗೆ ನೀಡಬಹುದಾದ ಅಮೂಲ್ಯವಾದ ಉಡುಗೊರೆ ಯಾವುದು? ಅವರ ತಾಯಿಯನ್ನು ಅವರು ಪ್ರೀತಿಸಬೇಕು!" ಹೃದಯ ಪೂರ್ವಕವಾಗಿ ಪ್ರೀತಿಸಬೇಕು ಅವರ ಹೇಳಿಕೆ ಸರಿಯಾದದ್ದೆ ಎಂದು ನಂಬುತ್ತೇನೆ. ಯಥಾರ್ಥವಾಗಿ ಪ್ರೀತಿಸುವುದು ಅಥವಾ ಹೆಸರಿಗೆ ಮಾತ್ರ ಅವರ ಅವಶ್ಯವಿರುವುದರ ನಡುವೆ ಇರುವ ವ್ಯತ್ಯಾಸವನ್ನು ಕಂಡು ಹಿಡಿಯ ಬಹುದು: ನೀವು ಯಾರನ್ನು ಪ್ರೀತಿಸುತ್ತೀರೋ, ಅವರನ್ನು ಗೌರವಿಸುವಿರಿ. ಹೆಂಡತಿಯನ್ನು ಗೌರವಿಸುವುದು ಎಂದರೆ ಆಕೆಯ ಸಲಹೆ ಸೂಚನೆಗಳಿಗೆ ಮಾನ್ಯತೆ ಮಾಡುವುದು ಎಂಬುದಾಗಿ. ಆಕೆಯ ಕೆಲಸಗಳನ್ನು ಮಾನ್ಯತೆ ಮಾಡಿ, ಅವಳ ಕೆಲಸಗಳು ಉತ್ತಮವಾಗಿರುವಾಗ ಆಕೆಯನ್ನು ಮೆಚ್ಚಿಕೊಳ್ಳುವುದು, ಆಕೆಯು ಮಾನ್ಯಳು, ಮತ್ತು ಆಕೆಯು ಮಾನವೀಯ ಕರುಣೆಯನ್ನು ಹೊಂದಿದವಳು ಎಂಬುದಾಗಿ ಒಪ್ಪಿಕೊಳ್ಳುವದು. ಆರ್ಥಿಕ ಯೋಜನೆಯ ಬಗ್ಗೆ ಆಕೆಯೊಂದಿಗೆ ಸಂವಾದಿಸುವುದು, ನೀವು ತಡವಾಗಿ ಕೆಲಸ ಮಾಡುವ ಕಾರಣವು ಆಕೆಗೆ ತಿಳಿದಿರಬೇಕು, ವಿಶ್ವಾಸವಿಟ್ಟು ಆಕೆಯೊಂದಿಗೆ ನಿಮ್ಮ ವ್ಯಯಕ್ತಿಕ ಸಮಸ್ಯೆಗಳ ಕುರಿತು ಮಾತನಾಡಿರಿ. ಗೌರವಿಸುವುದು ಎಂದರೆ, ಯೋಚನಾಪರರಾಗಿರುವುದು ಮತ್ತು ಸೌಮ್ಯದಿಂದ ಇರುವುದು.

**ಸಹಭಾಗಿತ್ವ**

ಗಂಡನು ತನ್ನ ಹೆಂಡತಿಯನ್ನು ಸಹಭಾಗಿ ಎಂದು ನಡೆಸಿಕೊಳ್ಳಬೇಕು ಎಂಬುದು ಪೇತ್ರನ ಹೇಳಿಕೆಯಾಗಿದೆ (ವಚನ 7). ಅವರು "ಜೀವವರಕ್ಕೆ ಬಾಧ್ಯರಾಗಿದ್ದಾರೆ." ಇಲ್ಲಿ ನನ್ನ ಭಾವನೆ ತಪ್ಪಾಗಿರಲಾಗದು, "ಬಾಧ್ಯರು" ಎಂದರೆ ಈ ಹಿನ್ನಲೆಯಲ್ಲಿ ಸ್ನೆಹ ಎಂಬುದಾಗಿರುತ್ತದೆ. ಸಹಭಾಗಿಳು ಸ್ನೇಹಿತರಾಗಿರುತ್ತಾರೆ. ಹೌದು, ಸ್ನೇಹಿತರು ಜವಾಬ್ದಾರಿಯಲ್ಲಿ ಪಾಲುಗಾರರಾಗಿದ್ದು ಮತ್ತು ಸಹಾಯಿಸುವವರಾಗಿರುತ್ತಾರೆ. ಅವರ ಸಮೃದ್ಧಿಯು ಮತ್ತು ಕಷ್ಟದ ಸಮಯಗಳು ಒಟ್ಟಾಗಿ ಬಂದು, ಒಟ್ಟಾಗಿ ಹೋಗುತ್ತವೆ. ಚಿರಕಾಲ ಇರುವಂಥ ಸಹಭಾಗಿತ್ವವು ಸಹಜವಾದದ್ದೆ, ಯಾಕೆಂದರೆ ಅದು ಸಮೀಪದ ಮತ್ತು ನಿರಂತರವಾದ ಸ್ನೇಹವಾಗಿರುತ್ತದೆ. ಗಂಡಂದಿರು ಹೆಂಡತಿಯರನ್ನು ತಮ್ಮ ಸಹಭಾಗಿಗಳು ಎಂದು ತಿಳಿದುಕೊಳ್ಳಬೇಕು.

ಪೇತ್ರನು ಒಂದು ಸಾರಿಯು ಸಹ ಲೈಂಗಿಕ ಎಂಬ ಪದವನ್ನು ಉಪಯೋಗಿಸದೆ, ಬಲವಾದ, ದೃಢವಾದ ದಾಂಪತ್ಯ ಜೀವಿತವನ್ನು ಕಟ್ಟುವದರ ಬಗ್ಗೆ ನೀಡಿರುವ ಬಲವಾದ ಮಾರ್ಗದರ್ಶನವು ಆಶ್ಚರ್ಯಕರವೇ. ಗಂಡ ಹೆಂಡತಿಯರ ನಡುವೆ ಇರುವ ಲೈಂಗಿಕ ಸಂಬಂಧವು ಪ್ರಾಮುಖ್ಯವಾದದ್ದೆ, ಪ್ರೇತ್ರನು ಅದನ್ನು ಸಹಜವಾದ ಪರದಿಯಲ್ಲಿಟ್ಟು ಕ್ರೈಸ್ತ ಗಂಡ ಮತ್ತು ಹೆಂಡತಿಯರಿಗೆ ಎಚ್ಚರಿಕೆಯ ಮಾತುಗಳನ್ನಾಡಿದನು.

## ಮುಕ್ತಾಯ

ಅಮೇರಿಕಾದ ಸಮಾಜದಲ್ಲಿರುವ ಪ್ರತಿಯೊಬ್ಬನು ತನ್ನ ಆಶಾಪಾಶವನ್ನು ತೃಪ್ತಿಪಡಿಸಿಕೊಳ್ಳಲು ಹೋರಾಡುವಾಗ, ಸಮಾಜದವರು, ಅವರೊಂದಿಗೆ ಸೇರದೆ, ದೇವ

ಜನರು ಮಾತ್ರ ಮಾರ್ಗದರ್ಶನ ನೀಡಬೇಕು. ಪರಾಸಕ್ತಿಯಿಂದಲೂ ಮತ್ತು ಗೌರವದ ಮುಖಾಂತರವಾಗಿ ಸುರಕ್ಷಿತವಾದ ಕುಟುಂಬಗಳನ್ನು ಕಟ್ಟುವದರ ಮೂಲಕ ದೃಢವಾಗಿ ಅಭಿವೃದ್ಧಿ ಹೊಂದಿದ ಸಮಾಜವನ್ನು ಕಟ್ಟಬಹುದು. ಕುಟುಂಬಗಳಿಗೆ ಆಧಾರವಾಗುವ ಕುರಿತು ಈ ದಿನಗಳಲ್ಲಿ ಕೇಳುತ್ತಿದ್ದೇವೆ, ಆದಾಗ್ಯೂ ಮೂರ್ಖವಾದ ಸಮಾಜವು ಬಲಹೀನವಾಗುವಂತೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ. ಆತ್ಮ ಹತ್ಯೆ ಸಂಖ್ಯೆ ಕಡಿಮೆಯಾಗುತ್ತಿಲ್ಲ. ಒಂಟಿ ತಂದೆ ತಾಯಿಗಳ ಜೊತೆ ಮಕ್ಕಳುಗಳು ಜೀವಿಸುವುದು ಕಡಿಮೆಯಾಗಲಿಲ್ಲ, ಮತ್ತು ದಾಂಪತ್ಯ ಸಮಸ್ಯೆಯನ್ನು ಪರಿಹರಿಸುವ ಸಲಹಾ ಕೇಂದ್ರಗಳನ್ನು ಜನರು ಬಯಸುತ್ತಿಲ್ಲ. ಈ ಇಪ್ಪತ್ತನೇ ಶತಮಾನದ ಕುಟುಂಬಗಳು ಒತ್ತಡಕ್ಕೆ ಒಳಪಟ್ಟಿವೆ. ಭೋಗಿಗಳಿಗಾಗಿ, ಸಂರಕ್ಷಣೆಯನ್ನು ವೈಯಕ್ತಿಕತೆಯನ್ನು ತೆರೆದಿಡಲಾಗಿದೆ, ನಾಳೆಯು ಏನನ್ನು ತರಬಹುದು ಎಂಬ ಭಯ ಜನರಲ್ಲಿ ಉಂಟಾಗಿದೆ. ಕ್ರೈಸ್ತರು ಪರಸ್ಪರ ಪರಿವರ್ತನೆಯನ್ನು ನಿಯಮವನ್ನು ಮಾರ್ಗದರ್ಶನವನ್ನು ಪೇತ್ರನು ನೀಡಿರುವನು.

---

ಟಿಪ್ಪಣಿ

[1]Allan Bloom, *The Closing of the American Mind* (New York: Simon and Schuster, 1987), 132.